


# ಪರ್ವತವನ್ನು ಸೋಲಿಸಿದ ಇಲಿಗಳು

■ ಅರುಣ್ ಕಿಲ್ಲೂರು
ಚಿತ್ರ: ಸಂತೋಷ್ ಸಸಿಹಿತ್ಲು

ಕಂಚರೋಡಿ ಎನ್ನುವ ಊರಿನಲ್ಲಿ ಪರ್ವತ ಒಂದರ ಕೆಳಗೆ ಇಲಿಯೊಂದು ಬಿಲದಲ್ಲಿ ವಾಸ ಮಾಡುತ್ತಿತ್ತು. ಅದು ತುಂಬು ಗರ್ಭಿಣಿ ಆದ ಕಾರಣ ಮರಿಗಳನ್ನು ಹಾಕಲು ತನ್ನ ಬಿಲದಲ್ಲಿ ಮೆತ್ತನೆಯ ಹತ್ತಿ, ಬಟ್ಟೆ ಇತ್ಯಾದಿ ವಸ್ತುಗಳನ್ನು ತಂದು ಪೇರಿಸುತ್ತಿತ್ತು. ಜಗತ್ತು ನಿದ್ದೆಯಲ್ಲಿ ಮುಳುಗಿರುವ ವೇಳೆಗೆ ಇಲಿಯ ಕೆಲಸಗಳು ನಡೆಯುತ್ತಿತ್ತು.

ಮರಿ ಹಾಕಲು ಸಮಯ ಸಮೀಪಿಸಿದ ಕಾರಣ ಇಲಿಯ ಚಟುವಟಿಕೆ ಹೆಚ್ಚಾಯಿತು. ಆದರೆ ಮಳೆ ಆಗಾಗ ಸುರಿಯುತ್ತಿದ್ದ ಕಾರಣ ಇಲಿ ಮೆತ್ತನೆಯ ವಸ್ತುಗಳನ್ನು ತಂದರೂ ಅದು ನೆನೆದು ಹಾಳಾಗಿ ಹೋಗುತ್ತಿತ್ತು. ಒಂದು ಬಾರಿ ಬಿಲದ ಒಳಗೆ ನೀರು ಹೋಗಿ ಮತ್ತೆ ಹೊಸ ಬಿಲ ಕೊರೆಯಬೇಕಾದ ಪ್ರಸಂಗ ಉಂಟಾಯಿತು. ಇದರಿಂದ ಆ ಇಲಿ ಬಹಳ ಸಂಕಷ್ಟವನ್ನು ಎದುರಿಸಬೇಕಾಯಿತು.

ಇಲಿಯ ಸಂಕಟ ಪರ್ವತಕ್ಕೆ ತಮಾಷೆಯ ವಿಷಯದಂತೆ ಕಂಡಿತು. ಇಲಿ ರಾತ್ರಿ ಬಿಲ ಕೊರೆಯುವುದು, ಮೆತ್ತನೆಯ ವಸ್ತುಗಳನ್ನು ತರುತ್ತಿರುವುದನ್ನು ಕಂಡು ಅದು ಇಲಿಯನ್ನು ತಮಾಷೆ ಮಾಡಿತು.

‘ಅಯ್ಯೋ ಇಲಿಯೇ! ನಿನ್ನನ್ನು ಕಂಡರೆ ನನಗೆ ಬೇಸರ ಆಗುತ್ತದೆ. ಇಷ್ಟು ಚಿಕ್ಕ ದೇಹ ಇಟ್ಟುಕೊಂಡು ಅದೆಷ್ಟು ಕೆಲಸ ಮಾಡುತ್ತೀ? ನನ್ನ ಕಾಲು ಭಾಗದಷ್ಟು ದೇಹ ಇದ್ದಿದ್ದರೆ ನಿನಗೆ ಬಿಲ ತೋಡಲು ಎಷ್ಟು ಅನುಕೂಲ ಆಗುತ್ತಿತ್ತು ಅಲ್ಲವೇ?’ ಎಂದು ಕಿಚಾಯಿಸಿತು.

ಇದರಿಂದ ಇಲಿಗೆ ಬಹಳ ಬೇಸರ ಆಯಿತು. ಆದರೆ ಅದು ಏನನ್ನೂ ಮಾತನಾಡಲಿಲ್ಲ.

‘ಇಲಿ, ಪಾಪ ನಿನಗೆ ಶಕ್ತಿ ಇಲ್ಲ ಎಂದು ಕಾಣುತ್ತದೆ. ಇರಲಿ, ಚೆನ್ನಾಗಿ ತಿಂದು ಬಿಲ ಕೊರೆ. ಆಗ ಬಿಲ ನನ್ನ ಹಾಗೆ ಗಟ್ಟಿಯಾಗಿ ನಿಲ್ಲುತ್ತದೆ’ ಎಂದಿತು.

ತನ್ನ ಶಕ್ತಿಯನ್ನು ಹೀಗಳೆದ ಪರ್ವತದ ಮೇಲೆ ಇಲಿಗೆ ಬಹಳ ಕೋಪ ಬಂತು. ಇದಕ್ಕೆ ಪಾಠ ಕಲಿಸಬೇಕು ಎಂದು ಅದು ನಿರ್ಧರಿಸಿತು.

ಕೊನೆಗೂ ಬಿಲ ತೋಡಿದ ಇಲಿ ಮರಿಗಳನ್ನು ದೊಡ್ಡದು ಮಾಡಿತು. ಇಲಿ ಮರಿಗಳು ಸ್ವತಂತ್ರವಾಗಿ ಓಡಾಡತೊಡಗಿದವು. ಅವುಗಳು ವಾಸಿಸಲು ಬೇರೆ ಬಿಲಗಳನ್ನು ಕೊರೆಯಲು ಆರಂಭಿಸಿದವು. ಆಗ ತಾಯಿ ಇಲಿ ತನ್ನ ಮರಿಗಳನ್ನು ಕರೆದು ತೊರೆ ಹರಿಯುತ್ತಿದ್ದ ಪರ್ವತದ ಬಳಿ ಸಾಲಾಗಿ ಬಿಲ ಕೊರೆಯಲು ಸೂಚಿಸಿತು.

ತಾಯಿ ಇಲಿ ಹೇಳಿದಂತೆ ಮರಿ ಇಲಿಗಳು ತೊರೆ ಹರಿಯುತ್ತಿದ್ದ ಜಾಗವನ್ನು ಹೊಂದಿಕೊಂಡು ಬಿಲ ಕೊರೆಯಲು ಆರಂಭಿಸಿದವು. ಇಲಿಗಳು ಕೊರೆಯುತ್ತಾ, ಕೊರೆಯುತ್ತಾ ಪರ್ವತದ ಇನ್ನೊಂದು ಬದಿಯವರೆಗೆ ದೊಡ್ಡ ಸುರಂಗವೇ ನಿರ್ಮಾಣ ಆಗಿ ಹೋಯಿತು. ಇಲಿಗಳು ಖುಷಿಯಿಂದ ಒಂದು ಕಡೆಯಿಂದ ಇನ್ನೊಂದು ಕಡೆಗೆ ಸುರಂಗದಲ್ಲಿ ತೆರಳಿ ಆಹಾರ ಸಂಗ್ರಹ